**ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಮದ್ದೂರು.**

ಆರ್.ಎ. 43/2024

ಪ್ರಮಾಣೀಕರಿಸಿದ ದಿನಾಂಕ: 20.03.2025

ಪಿ .ಡಬ್ಲ್ಯೂ: 2

**ಹೆಸರು** : ರಾಮಚಂದ್ರ.ಎನ್.
**ತಂದೆ ಹೆಸರು** : ನಾಗಶೆಟ್ಟಿ
**ವಯಸ್ಸು** : 45 ವರ್ಷ
**ವೃತ್ತಿ** : ವಕೀಲರು
**ವಾಸ ಸ್ಥಳ** : ಮಂಡ್ಯ

**ಸಾಕ್ಷಿ ವಿಚಾರಣೆ**

ನಾನು 2019 ರಲ್ಲಿ ತೀರ್ಪುಋಣಿರವರ ಪರ ವಕಾಲತ್ತು ಹಾಕಲು ನ್ಯಾಯಾಲಯಕ್ಕೆ ಬಂದಾಗ ಅಸಲು ದಾವದಲ್ಲಿ ಸದರಿಯವರು ಏಕಪಕ್ಷೀಯವಾಗಿದ್ದಾರೆ ಎಂಬ ವಿಚಾರ ನನಗೆ ಗೊತ್ತಿರಲಿಲ್ಲ. ಆ ನಂತರ ತೀರ್ಪುಋಣಿರವರನ್ನು ವಿಚಾರಿಸಿದಾಗ ಸದರಿಯವರು ನಾನು ಅಸಲು ದಾವೆಯಲ್ಲಿ ಯಾವುದೇ ಸಮನ್ಸ್ ಪಡೆದುಕೊಂಡಿರುವುದಿಲ್ಲವೆಂದು ತಿಳಿಸಿದರೆ. ಆ ನಂತರ ನಾನು ಅಸಲು ದಾವದ ದೃಢೀಕೃತ ನಕಲುಗಳನ್ನು ಪಡೆದುಕೊಂಡಿರುತ್ತೇನೆ. ಆ ರೀತಿ ದೃಢೀಕೃತ ನಕಲುಗಳನ್ನು ಪಡೆದು ಬೆರಳಚ್ಚುಗಾರರ ಮಹೇಶ್ ಅವರಿಗೆ ಮೇಲ್ಮನವಿ ಸಲ್ಲಿಸಲು ಅಪೀಲು ಮೆಮೋ ತಯಾರಿಸಲು ಕೊಟ್ಟಿದ್ದು, ಅವರು ತೀರಿಕೊಂಡರು. ಆ ನಂತರ ನನ್ನ ಮತ್ತು ತೀರ್ಪುಋಣಿರವರ ನಡುವಿನ ಸಂಪರ್ಕ ಕಡಿಮೆಯಾಗಿತ್ತು. ಸುಮಾರು 6-7 ತಿಂಗಳ ಹಿಂದೆ ಅವರು ಬೇರೆ ವಕೀಲರನ್ನು ನೇಮಕಮಾಡಿಕೊಳ್ಳುವುದಾಗಿ ತಿಳಿಸಿದರು ಅದಕ್ಕೆ ನಾನು ಎನ್.ಓ.ಸಿ ಕೊಟ್ಟಿರುತ್ತೇನೆ. ಬೆರಳಚ್ಚುಗಾರರಾದ ಮಹೇಶ್‌ರವರು ತೀರಿಕೊಳ್ಳಲಾಗಿ ಮತ್ತು ಅವರಿಗೆ ಬೆರಳಚ್ಚು ಮಾಡಲು ಕೊಟ್ಟಿದ್ದ ಕಡತ ನನಗೆ ಸಿಗಲಿಲ್ಲವಾದ ಕಾರಣ ಮೇಲ್ಮನವಿ ಸಲ್ಲಿಸಲು ನನಗೆ ಆಗಲಿಲ್ಲ.

**ಪಾಟೀ ಸವಾಲು: ಎದುರುದಾರರ ಪರ ವಕೀಲರ ವಿನಂತಿಯ ಮೇರೆಗೆ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂಎಸಿಟಿ.,
ಮದ್ದೂರು.